40th Year of Publication. Phone: 3728.

ವಾರ್ಷಿಕ ಚಂದಾ ರೂ. 12—50.

ಪ್ರಭಾತ

ಬೆಲೆ 20 ಪೈಸೆ.

ಸಂಪುಟ: ೪೦. ಸಂಚಿಕೆ: ೩೭. | ಸಂಪಾದಕ: ಕುಡ್ವಿ ವಾಸುದೇವ ಶೆಣೈ. ರವಿವಾರ ತಾ. 20—10—1974 | VOL. 40. No. 37.

ಶ್ರೀ ಗುರುರಾಯ ಕಲ್ಯಾಣಮಂಟಪದ ಶಂಕುಸ್ಥಾಪನೆ

ಮಂಗಳೂರು ಜೋಡುಮಠ ರಸ್ತೆಯಲ್ಲಿರುವ ನೆಲ್ಲಿಕಾಯಿ ಮಠದ ಶ್ರೀ ರಾಘವೇಂದ್ರ ಸ್ವಾಮಿ ಬೃಂದಾವನದ ಪ್ರತಿಷ್ಠೆಯಾಗಿ 19 ತಿಂಗಳುಗಳೊಳಗೆ ಅದನ್ನು ಸಂದರ್ಶಿಸುವ ಭಕ್ತಾದಿಗಳ ಸಂಖ್ಯೆ ಸಾಕಷ್ಟು ಏರಿದ್ದು ಸ್ಥಳಾವಕಾಶದ ಕೊರತೆ ನೀಗಲು 'ಶ್ರೀ ಗುರುರಾಯ ಕಲ್ಯಾಣ ಮಂಟಪ' ಎಂಬ ವಿಸ್ತೃತ ಕಟ್ಟಡ ಕಟ್ಟಿಸಲು ನಿರ್ಧರಿಸಲಾಗಿದ್ದು ಅದರ ಶಂಕುಸ್ಥಾಪನೆಯು ತಾ. 17ರಂದು ಸಾಯಂಕಾಲ ಉಡುಪಿ ಶ್ರೀ ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರ ದಿವ್ಯಹಸ್ತದಿಂದ ನಡೆಯಿತು. ಕೆನರಾ ಚೇಂಬರಿನ ಅಧ್ಯಕ್ಷ ಶ್ರೀ| ಸಾಹುಕಾರ ಎಂ. ಬಾಬಾಪೈಯವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಸುಮಾರು 50,000 ರೂಪಾಯಿ ಅಂದಾಜು ಖರ್ಚು ತಗಲಬಹುದಾದ ಈ ನೂತನ ಇಮಾರತಿಗೆ ಸ್ವಾಮೀಜಿಯವರ ಸಮಕ್ಷಮದಲ್ಲೇ ರೂ.10,000ಕ್ಕೆ ಮೇಲ್ಪಟ್ಟು ವಾಗ್ದಾನಗಳಾಗಿದ್ದು ಬೃಂದಾವನದ ದ್ವಿತೀಯ ವಾರ್ಷಿಕೋತ್ಸವದೊಳಗೆ ಕಟ್ಟಡದ ಕೆಲಸ ಪೂರೈಸಿ ಅದರ ಉದ್ಘಾಟನೆಯನ್ನೂ ಶ್ರೀಶ್ರೀಯವರ ವರದಹಸ್ತದಿಂದಲೇ ನಡೆಸಬೇಕೆಂಬ ಸಂಕಲ್ಪ ಬೃಂದಾವನ ಟ್ರಸ್ಟಿನವರದಾಗಿದೆ. 'ಸತ್ಸಂಗ' ಎಂಬ ಚಿಕ್ಕ ಕೃತಿಯನ್ನೂ ಈ ಸಂದರ್ಭದಲ್ಲಿ ಸ್ವಾಮೀಜಿಯವರು ಬಿಡುಗಡೆಮಾಡಿದರು. ಟ್ರಸ್ಟಿನ ಅಧ್ಯಕ್ಷ ಶ್ರೀ| ಕಲ್ಬಾವಿ ವೆಂಕಟ್ರಾಯರು ಆರಂಭದಲ್ಲಿ ಸ್ವಾಗತಿಸಿ, ಕಾರ್ಯದರ್ಶಿ ಶ್ರೀ| ರಾಮ ಕುಬಣೂರಾಯರು ಕೊನೆಯಲ್ಲಿ ಧನ್ಯವಾದಗಳನ್ನರ್ಪಿಸಿದರು. ಮೆನೇಜಿಂಗ್ ಟ್ರಸ್ಟಿ ಶ್ರೀ| ತುಪಾಕಿ ಶ್ರೀನಿವಾಸಾಚಾರ್‌ರವರು ಸಮಾರಂಭಕ್ಕೆ ಯಶ ಕೋರಿ ಬಂದ ಸಂದೇಶಗಳನ್ನು ಓದಿದುದಲ್ಲದೆ ವೃಂದಾವನದ ಈ ವರೆಗಿನ ಚಟುವಟಿಕೆಗಳ ಸಂಕ್ಷಿಪ್ತ ವರದಿ ಮತ್ತು ಲೆಕ್ಕಪತ್ರಗಳನ್ನು ಸಭೆಯ ಮುಂದಿರಿಸಿದ್ದರು. ಸರ್ವಶ್ರೀ ಶ್ರೀಧರ ಆಚಾರ್, ಡಿ. ಮೋಹನರಾವ್ ಮತ್ತು ಹುನಗುಂದ ಅವರು ಆಮಂತ್ರಿತರ ಕಡೆಯಿಂದ ನೂತನ ಕಾರ್ಯಕ್ಕೆ ಯಶಕೋರಿ ಭಾಷಣಮಾಡಿದರು.

ನೆರೆಪೀಡಿತರಿಗೆ ವಸತಿಪೂರೈಕೆ

ಇತ್ತೀಚೆಗೆ ಸಮಗ್ರ ದಕ್ಷಿಣ ಕನ್ನಡ ಜಿಲ್ಲೆಯನ್ನೇ ತತ್ತರಿಸುವಂತ ಮಾಡಿ ಅಪಾರ ಕಷ್ಟನಷ್ಟಗಳನ್ನುಂಟುಮಾಡಿದ ನೆರೆಯಿಂದ ಮನೆಮಾರು ಕಳಕೊಂಡವರಿಗೆ ಶೀಘ್ರದಲ್ಲಿಯೇ ಜಿಲ್ಲೆಯಲ್ಲಿ 5000 ಮನೆಗಳನ್ನು ನಿರ್ಮಿಸಿಕೊಡಲಾಗುವುದೆಂದು ಕರ್ನಾಟಕ ರಾಜ್ಯ ವಿತ್ತಸಚಿವ ಶ್ರೀ| ಎಂ. ವೈ. ಘೋರ್ಪಡೆಯವರು ತಾ. 16 ರಂದು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಸೇರಿದ್ದ ಜಿಲ್ಲಾ ಶಾಸಕರ ಹಾಗು ಸರಕಾರಿ ಅಧಿಕಾರಿಗಳ ಸಭೆಯಲ್ಲಿ ತಿಳಿಸಿದರು. ನೆರೆಯಿಂದ ಸಂಪೂರ್ಣವಾಗಿ ನಿರ್ವಾಸಿತರಾದವರಿಗೆ ಒಟ್ಟು ರೂ. 2,400 ನೀಡಲಾಗುವುದು; ಈ ಹಣದಲ್ಲಿ ರೂ. 1000 ಸಬ್ಸಿಡಿಯಾಗಿ ಹಾಗು ಉಳಿದ ರೂ. 1,400 ಬಡ್ಡಿರಹಿತ ಸಾಲವನ್ನಾಗಿ ಕೊಡಲಾಗುವುದೆಂದೂ ಈ ಮನೆಗಳನ್ನು ಸುರಕ್ಷಿತ ಪ್ರದೇಶಗಳಲ್ಲಿ ಜನತಾ ವಸತಿ ಯೋಜನೆಯ ಮಾದರಿಯಲ್ಲಿ ನಿರ್ಮಿಸಲಾಗುವುದೆಂದೂ ಅವರು ತಿಳಿಸಿದರು. ಪುನರ್ವಸತಿಗಾಗಿ ಜೀವವಿಮಾ ಸಂಸ್ಥೆಯು ಈಗಾಗಲೇ ರೂ. 1·5 ಕೋಟಿ ಮಂಜೂರು ಮಾಡಿದ್ದು, ಈ ಪುನರ್ವಸತಿ ಯೋಜನೆಯ ಒಟ್ಟು ಅಂದಾಜು ಖರ್ಚು ರೂ. 1·20 ಕೋಟಿಯಾಗಬಹುದೆಂದು ಅಂದಾಜುಮಾಡಲಾಗಿದೆ.

ಗಡಿವಿವಾದ ಪ್ರತಿನಿಧಿ

ಕರ್ನಾಟಕ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿಗೆ ಖ್ಯಾತ ಕವಿ ಕಯ್ಯಾರ ಕಿಂಞಣ್ಣ ರೈಯವರನ್ನು ಗಡಿವಿವಾದ ಪ್ರತಿನಿಧಿಯಾಗಿ ನಾಮಕರಣ ಮಾಡಿರುವರೆಂದು ತಿಳಿದುಬಂದಿದೆ.

ಸಂಗೀತ ಕಚೇರಿ

ಮಂಗಳೂರು ಮೋತಿಮಹಲ್ ಹೊಟೆಲಿನ ಆಡಳ್ತವರ್ಗದವರು ಕಳೆದ ತಾ. 18 ರಂದು ರಾತ್ರಿ 'ಮಧುವನ'ದ ವಠಾರದಲ್ಲಿ ಸಂಗೀತ ಸಮ್ರಾಟ್ ಪಂಡಿತ ಭೀಮಸೇನ ಜೋಶಿಯವರ ಶಿಷ್ಯ ಸುರಮಣಿ ನಾರಾಯಣರಾವ್ ದೇಶಪಾಂಡೆ ಇವರ ಹಿಂದೂಸ್ತಾನಿ ಸಂಗೀತ ಕಚೇರಿಯೊಂದನ್ನು ಏರ್ಪಡಿಸಿದ್ದರು. ಪೂರ್ವಕಲ್ಯಾಣ ರಾಗದಿಂದ ಕಚೇರಿ ಆರಂಭಿಸಿದ ಗಾಯಕರು ಖಮಾಜ್ ಠುಮ್ರಿ ಮತ್ತು ಮರಾಠಿ ಭಾವಗೀತಗಳನ್ನು ಹಾಡಿ ಭೈರವಿಯಲ್ಲಿ ಕಚೇರಿ ಅಂತ್ಯಗೊಳಿಸಿದರು. ಸಂಗೀತ ವ್ಯವಸ್ಥೆಗೊಳಿಸಿದವರ ಪರವಾಗಿ ಶ್ರೀ| ಕುಡ್ವಿ ಪಾಂಡುರಂಗ ಶೆಣೈಯವರು ಆರಂಭದಲ್ಲಿ ಸ್ವಾಗತಿಸಿ ಕೊನೆಯಲ್ಲಿ ಧನ್ಯವಾದಗಳನ್ನರ್ಪಿಸಿದರು.

ಶಾಸನ ಕೈಬಿಡಲು ಒತ್ತಾಯ

ಸದ್ಯದಲ್ಲೇ ಕರ್ನಾಟಕ ಸರಕಾರವು ತರಲಿರುವ ಮೀನುಗಾರಿಕಾ ಶಾಸನವು ಮೀನುಗಾರರಿಗೆ ಅನ್ಯಾಯ ಉಂಟುಮಾಡುವುದಾಗಿರುವುದರಿಂದ ಅದನ್ನು ಕೈಬಿಡುವಂತೆ ಕದಿಕೆ ಮೊಗವೀರ ಸಭಾಗೃಹದಲ್ಲಿ ಇತ್ತೀಚೆಗೆ ಸೇರಿದ ದ. ಕ. ಜಿಲ್ಲೆಯ ಮೂರು ಮೊಗವೀರ ಗ್ರಾಮಸಭೆಗಳ ಜಂಟಿ ಸಭೆಯಲ್ಲಿ ಒತ್ತಾಯಿಸಲಾಗಿದೆ. ಸಭೆಯ ಅಧ್ಯಕ್ಷತೆಯನ್ನು ಹಳೆಯಂಗಡಿ ಗ್ರಾಮಪಂಚಾಯತ್ ಅಧ್ಯಕ್ಷ ಶ್ರೀ| ಲೀಲಾಧರ ಕಾಂಚನ್‌ರವರು ವಹಿಸಿದ್ದರು.

—೦—

ಲೇಖಾಂಕ—೧೨೯೬.

ಗೋಚರ ಫಲ—೩೧

(ಶನಿಚಾರ ಫಲ ನವಮದಲ್ಲಿ)

(ಎಂ. ಸುಬ್ರಾಯನ್.)

(ತಾ. 15—9—74ರ ಸಂಚಿಕೆಯಿಂದ ಮುಂದುವರಿದುದು)

ಶನಿಯು ಆಕಾಶಮಂಡಲದಲ್ಲಿರುವ ಮಹತ್ವದ ಗೋಲದ ನೆಲೆಯುಳ್ಳವನು. ಇವನಂತಹುದು ಅನ್ಯ ಗೋಳವಲ್ಲ. ಅನ್ಯ ಗ್ರಹನೂ ಅಲ್ಲ. ಈ ಗ್ರಹನು ಮಾನವನಲ್ಲಿ ವೈರಾಗ್ಯ ನಿರ್ಮಾಣ ಕೊಡುತ್ತಿರುವನು. ಇದರಿಂದ ಇವನು ಪರಮ ದಯಾಳುವಾಗಿರುವನು. ದಯಾಕಾರಕನಾದ ಗ್ರಹನಾದುದರಿಂದಲೆ ಭೃತ್ಯಕಾರಕ ಗ್ರಹನೆಂದು ಜ್ಯೋತಿಶ್ಶಾಸ್ತ್ರಕಾರರು ಹೇಳುತ್ತಿರುವರು. ಇವನ ಪ್ರಭಾವ ಮಾನವನಲ್ಲಿ ಆಪತ್ತು ವಿಪತ್ತುಗಳ ಶಿಖರಕ್ಕೇರಿಸಿ ಅವುಗಳನ್ನು ಎದುರಿಸಿ ಮನುಷ್ಯತೆಯ ನೆಲೆಗೆ ಕೊಂಡೊಯ್ಯುವಿಕೆಯಾಗುತ್ತದೆ. ಮಾನವನ ಜೀವನ ಕ್ರಯವಿಕ್ರಯದ ವಸ್ತುವಲ್ಲ. ಅದನ್ನು ಗುಣ ಬೆಲೆಗಳಿಂದ ಕೂಡಿದ್ದನ್ನಾಗಿ ಮಾಡಿ ಲೋಕೋಪಕಾರ ಸಾಧನೆಗಳುಳ್ಳದನ್ನಾಗಿಸಬೇಕು. ಈ ಸಾಧನೆ ವಿವಿಧ ಮಾರ್ಗದಿಂದ ಹಲವಾರು ಶೋಧನೆ ರಾಜಕೀಯ ಧಾರ್ಮಿಕವೇ ಮೊದಲಾದ ಅಂಗಗಳಿಂದ ಮಾನವನ ಸೇವೆ ಸಲ್ಲುತಿದ್ದು ಈ ಸೇವಾಕರ್ಮದ ತಪಸ್ವಿಯ ಸಾಧನೆಗೆ ಶನಿಯು ಅವಕಾಶ ಕೊಡುತ್ತಿರುವನು. ಅವನು ಸೇರಿದ ಅನ್ಯ ಗ್ರಹಸಂಬಂಧವು ವೈವಿಧ್ಯತೆಯ ದ್ಯೋತಕವಾಗುತ್ತಿರುವುದು.

ಮಾನವನಲ್ಲಿ ದೈವೀಯ ಗುಣದ ಅವಲಂಬನೆಗೆ ಶನಿಯೇ ಕಾರಣನಾಗುತ್ತಿರುವನು. ಈ ಶನಿಯು ಯಾವ ಗ್ರಹನ ಯೋಗಸಂಬಂಧ ಹೊಂದಿರುವನೋ ಆ ಗ್ರಹಸಂಬಂಧದ ವ್ಯಕ್ತಿಯನ್ನು ದೂರ ದೃಷ್ಟದ ನೆಲೆಗೆ ತರುತ್ತಿರುವನು. ಶನಿಯು ಅದೃಷ್ಟದ ಮೇಲೆ ತನ್ನ ಪ್ರಭಾವ ಬೀರುತ್ತಿರುವ(Evil fate bringer) ಗ್ರಹನಾಗಿರುವನು. ಮನುಷ್ಯನಿಗೆ ಕಷ್ಟ ಬೇನೆಗಳು ಬರುತ್ತವೆ, ಅವನ್ನು ಹೊಂದಿ ಎದುರಿಸಿ ಆತನು ಮೇಲಕ್ಕೆ ಬರುತ್ತಿರುವನು, ಯಶಸ್ಸಿನ ನೆಲೆಗೆ ಬರುತ್ತಿರುವನು. ಮಹತ್ವಿಕೆಯಿಂದ ಬೆಳಗಿಬರುವನು. ಕಬ್ಬಿಣವನ್ನು ಕುಲುಮೆಯಲ್ಲಿ ಹಾಕಿ ಕರಗಿಸಿದ ಬಳಿಕವೇ ಅದು ಉಕ್ಕಾಗುತ್ತಿರುವುದು. ಅಂತೆಯೇ ಕಷ್ಟದುಃಖಗಳನ್ನು ಉಂಡು ಮನುಷ್ಯನ ಉನ್ನತಿಯು ನೆಲೆಗೊಳ್ಳುತ್ತಿರುವನು. ಈ ಉನ್ನತಿಯ ಸಾಧಕ ಗ್ರಹ ಶನಿ.

ಗೋಚರದ ಆತನ ಪರಿಭ್ರಮಣೆಯಲ್ಲಿ ಮಹತ್ವದ ಘಟನೆಗಳಾಗುತ್ತವೆ. ಜನ್ಮನಾ ಆತನು ಅನುಕೂಲ ಸ್ಥಿತಿಯಿಂದ ಇದ್ದರೆ ಅವನ ಪರಿಣಾಮ ಅನ್ಯಗ್ರಹರಲ್ಲಿ ಹೇಗಾಗುತ್ತಿರುವುದೆಂದು ತಿಳಿದು ಫಲಬೋಧನೆಗೊಳ್ಳುವುದು ಹಿತಕರ. ಶನಿ ಜನ್ಮಕುಂಡಲಿಯಲ್ಲಿ ಕ್ರಾಂತಿಯ ಯೋಗಕಾರಕ ಸಂಬಂಧವನ್ನು ಅನ್ಯಗ್ರಹರ ಸಂಪರ್ಕದಿಂದ ಹೊಂದಿ ಇದ್ದರೆ ಅವನ ಊರ್ಜಿತಾವಸ್ಥೆಗಿರುವ ಕ್ರಾಂತಿಯಾಗುತ್ತಿರುವುದು. ರಾಜಕೀಯ ಧಾರ್ಮಿಕ ವಿಜ್ಞಾನಾದಿ ಸಂಬಂಧಗಳಿಂದ ಕ್ರಾಂತಿಪುರುಷರು ಕಾಣುತ್ತಿರುವರು. ಈ ಕ್ರಾಂತಿಯ ಸಂಪರ್ಕ ಶನಿಯಿಂದಲೇ ಉಂಟಾಗುತ್ತಿರುವುದು. ಶನಿ ಅನ್ಯ ಗ್ರಹರೊಂದಿಗೆ ಸೇರಿದಾಗ ಮತ್ತು ಅವನು ಹೊಂದಿದ ಭಾವಸಂಬಂಧ ಗ್ರಹ ಕಾರಕ ಸಂಬಂಧದ ವಿಷಯದಲ್ಲಿ ಆತನ ಪರಿಣಾಮವಾಗುತ್ತಿರುವುದು. ರವಿ ಚಂದ್ರರು ರಾಜಕೀಯ ಗ್ರಹರೂ ಹೌದು. ಪಿತೃಮಾತೃ ಆತ್ಮಮನೋಕಾರಕರೂ ಸರಿ. ಕುಜ ಸಹೋದರ ಸತ್ವಕಾರಕ, ಬುಧ ಮಾತುಲ ವಾಕ್ ವಿದ್ಯಾಕಾರಕ, ಗುರು ಜ್ಞಾನ ಸುಖಸಂತಾನಕಾರಕ. ಶುಕ್ರ ಕಾಮಕಾರಕ. ಈ ಕಾರಕತ್ವ ಸಂಬಂಧದ ವ್ಯಕ್ತಿಗಳಲ್ಲಿಯೂ ಅನ್ಯ ವಿಷಯದಲ್ಲಿಯೂ ಗೋಚರದಿಂದ ಅವನ ಯುತಿ ಪರಿಣಾಮ ಕೊಡುತ್ತದೆ. ಹಾನಿಯೂ ಉನ್ನತಿಯ ಫಲಗಳು ಇರುತ್ತವೆ. ಉನ್ನತಿಯ ಶುಭಫಲಾಧಿಕ್ಯಕ್ಕೆ ಮೇಷ, ಸಿಂಹ, ಧನು, ಕರ್ಕಟಕ, ವೃಶ್ಚಿಕ, ಮೀನಗಳ ಶನಿಯು ಕಾರಣನಾಗುತ್ತಿರುವನು.

ಕುಜನ ಮೇಲೆ ಆತನ ಪರಿಭ್ರಮಣೆ ತೃತೀಯ ಏಕಾದಶ ಸಂಪರ್ಕಹೊಂದಿದವನು ಕುಜನಾಗಿದ್ದರೆ ಸಹೋದರರ ಮೇಲೆ ಪರಿಣಾಮವಾಗುತ್ತಿರುವುದು; ಸಹೋದರ ಸುಖಕ್ಕೆ ನ್ಯೂನತೆ ಅವರಲ್ಲಿ ದೋಷ ಸ್ಥಿತಿಗಳು ಸಂಭವಿಸುತ್ತಿರುವವು. ದೋಷಸ್ಥಿತಿ ರವಿಯ ದ್ವಿದ್ವಾದಶಕ ಪಂಚಮ ಕರ್ಮಸ್ಥಿತಿಯಲ್ಲಾಗುತ್ತಿರುವುದು. ಇದರಿಂದ ಕಾಲನಿರ್ದೇಶಗೊಳ್ಳಲು ಅನುಕೂಲವಾಗುತ್ತದೆ. ಇವನು ಅಂಗದಲ್ಲಿ ನರ ಮತ್ತು ವಾಯು-ವಾತದ ಪರಿಣಾಮ ಕೊಡುವ ಗ್ರಹನು. ವಾತವಿಕಾರ ನರ ಸಂಬಂಧದ ದೌರ್ಬಲ್ಯಪೀಡಿತ ಉರಿತಾದಿಗಳನ್ನು ಮಾಡುತ್ತಿರುವನು.

ಶನಿಯ ವಿಚಾರದಲ್ಲಿ ಎಲ್ಲರೂ ಬೆದರುತ್ತಿರುವರು. ಏಳೂವರೆ ಶನಿಯೆಂದೊಡನೆ ಬೆದರುವರು. ಲಗ್ನ ಚಂದ್ರ ರವಿಗಳಿಂದ ಏಳೂವರೆ ಶನಿಯನ್ನು ಚಿಂತಿಸಬೇಕು. ಲಗ್ನದ ಏಳೂವರೆ ಚಂದ್ರನ ಏಳೂವರೆ ರವಿಯ ಏಳೂವರೆ ಶನಿಚಾರವೆಂದು ಮೂರು ಏಳೂವರೆ ಶನಿಯನ್ನು ಜೋಯಿಸನು ತಿಳಿದಿರುವುದು ಅಗತ್ಯ. ಜನ್ಮನಾ ಲಗ್ನ ಚಂದ್ರರಿಂದ ಏಳೂವರೆ ಶನಿಯೋಗ ಇದ್ದರೆ ಆತನಿಗೆ ಬರುವ ಏಳೂವರೆ ಶನಿಚಾರ ಉದ್ಯೋಗ ದಾಂಪತ್ಯ ಸಂತಾನಾದಿ ಸುಖಪ್ರಾಪ್ತಿಯ ಕಾಲವಾಗುತ್ತಿರುವುದು. ಲಗ್ನದ ಏಳೂವರೆ ದೇಹಕ್ಕೆ ರವಿಯದು ಆತ್ಮಕ್ಕೆ ಚಂದ್ರನದು ಮನಸ್ಸಿಗೆ ಪರಿಣಾಮ ಬೀರುವ ಶನಿಚಾರವಾಗುತ್ತಿರುವುದು. ಇದರ ಪರಿಣಾಮವೇ ಆತನ ಜೀವನದಲ್ಲಿ ಅನುಭವಕ್ಕೆ ಬರುವುದು.

(ಸಶೇಷ)

——

ಶತಾಯುಷಿಯ ನಿಧನ

ಮಂಗಳೂರಲ್ಲಿ ಆಯುರ್ವೇದ ಚಿಕಿತ್ಸಕರಾಗಿ ಖ್ಯಾತಿವೆತ್ತಿದ ಪಂಡಿತ ಕೆ. ಬಿ. ಅಡ್ಯಂತಾಯ ಅವರು ತಾ. 15ರಂದು ಬೆಳಗ್ಗೆ ತಮ್ಮ 101ನೇ ವಯಸ್ಸಿನಲ್ಲಿ ಪಡುಬಿದ್ರೆ ನಾಗರಾಜ ಎಸ್ಟೇಟಿನಲ್ಲಿ ನಿಧನರಾದರು.

ಜಿ. ವಾಸುದೇವ ಪೈ ಸ್ಮಾರಕ ಚಿಕಿತ್ಸಾಲಯ

"ದಿ| ಜಿ. ವಾಸುದೇವ ಪೈಗಳವರು ತನ್ನ ಜೀವನದಲ್ಲಿ ಬರೇ ಸಮಾಜಸೇವಕನಾಗಿರದೆ ತನ್ನ ಒಡನಾಡಿಗಳಲ್ಲಿ ಸಮಾಜ ಸೇವಾ ಮನೋಭಾವವನ್ನೂ ಬೆಳೆಯಿಸಿ ಮೂಡಬಿದ್ರೆಯನ್ನು ಆದರ್ಶ ಸಮಾಜ ಸೇವಾ ಕೇಂದ್ರವನ್ನಾಗಿ ಪರಿವರ್ತಿಸುವಲ್ಲಿ ಸಫಲರಾಗಿದ್ದಾರೆ" ಎಂಬುದಾಗಿ ಶ್ರೀ ಧರ್ಮಸ್ಥಳದ ಶ್ರೀ| ಡಿ. ವೀರೇಂದ್ರ ಹೆಗ್ಗಡೆಯವರು ತಾ. 17ರಂದು ಮೂಡಬಿದ್ರೆಯಲ್ಲಿ ದಿ| ಜಿ. ವಾಸುದೇವ ಪೈ ಸ್ಮಾರಕ ಚಿಕಿತ್ಸಾಲಯದ ಉದ್ಘಾಟನೆಮಾಡುತ್ತ ಹೇಳಿದರು. ಮೂಡಬಿದರೆಯ ಶ್ರೀ| ಎ. ಜಿ. ಸೋನ್ಸ್‌ರವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು; ಚಿಕಿತ್ಸಾಲಯದ ದಂತಚಿಕಿತ್ಸಾ ವಿಭಾಗವನ್ನು ಮುಂಬಯಿಯ ಪ್ರಸಿದ್ಧ ಉದ್ಯಮಿ ಶ್ರೀ| ಎಂ. ಅಣ್ಣಪ್ಪಯ್ಯ ಅವರು ಉದ್ಘಾಟಿಸಿದರು. "ಸ್ಮರಣೀಯ ವ್ಯಕ್ತಿಗೆ ಅರ್ಹ ಸ್ಮಾರಕ ನಿರ್ಮಿಸಿ, ಮೂಡಬಿದ್ರೆಯ ಜನ ಕೃತಾರ್ಥರಾದರು" ಎಂಬುದಾಗಿ ಮುಖ್ಯ ಅತಿಥಿಯಾಗಿ ಸಮಾರಂಭದಲ್ಲಿ ಭಾಗವಹಿಸಿದ್ದ ಉಡುಪಿ ಎಂ. ಜಿ. ಎಂ. ಕೊಲೇಜಿನ ಪ್ರಿನ್ಸಿಪಾಲ್ ಶ್ರೀ| ಕು. ಶಿ. ಹರಿದಾಸ ಭಟ್ ತಮ್ಮ ಭಾಷಣದಲ್ಲಿ ಹೇಳಿದರು. ಪ್ರಾರಂಭದಲ್ಲಿ ಸಮಾಜಮಂದಿರ ಸಭಾದ ಅಧ್ಯಕ್ಷ ಶ್ರೀ| ಎಸ್. ಎನ್. ಮೂಡಬಿದ್ರಿಯವರು ಸ್ವಾಗತಿಸಿ ಕೊನೆಯಲ್ಲಿ ಸ್ಮಾರಕ ಆಸ್ಪತ್ರೆಯ ವೈದ್ಯಾಧಿಕಾರಿ ಡಾ| ವಿದ್ಯಾಧರ ಶೆಟ್ಟಿಯವರು ಧನ್ಯವಾದ ಅರ್ಪಿಸಿದರು.

ಜಿಲ್ಲಾ ಜನಸಂಘದ ಅಧ್ಯಕ್ಷರಾಗಿ ಪುನರಾಯ್ಕೆ

ಭಾರತೀಯ ಜನಸಂಘದ ದಕ್ಷಿಣ ಕನ್ನಡ ಜಿಲ್ಲಾ ಅಧ್ಯಕ್ಷರಾಗಿ ಉಡುಪಿಯ ಡಾ| ವಿ. ಎಸ್. ಆಚಾರ್ಯರು ಮೂರನೇ ಅವಧಿಗೆ ಅವಿರೋಧವಾಗಿ ತಾ. 13ರಂದು ಪುನರಾಯ್ಕೆಯಾದರು. ಜಿಲ್ಲಾ ಸಮಿತಿಯ ಉಪಾಧ್ಯಕ್ಷರುಗಳಾಗಿ ಶ್ರೀ| ಜಿ. ರಮೇಶ ಕಾಮತ್ (ಮಂಗಳೂರು) ಮತ್ತು ಪುತ್ತೂರಿನ ಎಡ್ವಕೇಟ್ ಶ್ರೀ| ಕೆ. ರಾಮಭಟ್ಟರು ಚುನಾಯಿತರಾಗಿರುವರು. ಪ್ರಧಾನ ಕಾರ್ಯದರ್ಶಿಯಾಗಿ ಶ್ರೀ| ಕರಂಬಳ್ಳಿ ಸಂಜೀವ ಶೆಟ್ಟಿ, ಜತೆಕಾರ್ಯದರ್ಶಿಗಳಾಗಿ ಬಂಟ್ವಾಳದ ಶ್ರೀ| ರುಕ್ಮಯ ಪೂಜಾರಿ ಮತ್ತು ಮಂಗಳೂರಿನ ಶ್ರೀ| ಕೆ. ನಾರಾಯಣ ಶೆಟ್ಟರು ಆಯ್ಕೆಯಾಗಿರುವರು. ಶ್ರೀ| ಸಿ. ಜಿ. ಕಾಮತರು ಕೋಶಾಧ್ಯಕ್ಷರಾಗಿ ಪುನಃ ಆಯ್ಕೆಯಾಗಿರುವರು. ಪ್ರಾಂತೀಯ ಪ್ರತಿನಿಧಿಗಳಾಗಿ ಸರ್ವಶ್ರೀ ಎಂ. ವಾಮನ ಪೈ (ಬೈಂದೂರು), ಕೆ. ಮಹಾಬಲೇಶ್ವರ ಅಡಿಗ (ಕುಂದಾಪುರ), ಲಕ್ಷ್ಮಣ ನಾಯಕ್ (ಬ್ರಹ್ಮಾವರ), ರಾಮದಾಸ ಶೆಣೈ (ಉಡುಪಿ), ಮಾಧವ ನಾಯಕ್ (ಕಾರ್ಕಳ), ಪಿ. ಯಸ್. ಭಟ್ (ಮೂಡಬಿದ್ರೆ), ಕಾಳಪ್ಪಾ ಕುಳ್ಕಾನ್ (ಸುರತ್ಕಲ್), ಮಿತ್ರದಾಸ ಹೆಗ್ಡೆ (ಮಂಗಳೂರು), ಕೆ. ಸಂಜೀವ ಶೆಟ್ಟಿ (ಮಂಗಳೂರು—2), ಮೋಹನ ಪೈ (ಬಂಟ್ವಾಳ), ನೇಮಿರಾಜ ಶೆಟ್ಟಿ (ಬೆಳ್ತಂಗಡಿ), ವಿಶ್ವನಾಥ ನಾಯಕ್ (ಪುತ್ತೂರು), ಕೆ. ಕರಿಯಪ್ಪ ರೈ (ಕಡಬ) ಮತ್ತು ಶಂಕರ ರಾವ್ (ಸುಳ್ಯ) ಇವರು ಚುನಾಯಿತರಾಗಿರುವರು.

ಈ ವಾರದ ಭವಿಷ್ಯ

(ಎಸ್. ಸುಬ್ರಾಯನ್)

ತಾ.20-10-74ರಿಂದ 27-10-1974ರ ವರೆಗೆ

ಮೇಷ:

ನೀವು ಒಳ್ಳೆಯ ಚಿಂತನೆಗೊಂಡು ಅಭ್ಯುದಯಕ್ಕಿರುವ ವ್ಯವಸಾಯಗೊಂಡವರಾಗುವಿರಿ. ಆತ್ಮೀಯ ಬಂಧುಜನರ ವಿಯೋಗವಿರುತ್ತದೆ. ಜೀವನದಲ್ಲಿ ಅಭಿವೃದ್ಧಿಗಿರುವ ವ್ಯವಸಾಯಗಳು ನಡೆಯಲಿರುತ್ತವೆ. ರಿಕಾರ್ಡು ವ್ಯವಹಾರಗಳು ಮುಂದುವರಿಯುತ್ತವೆ. ವ್ಯಾಪಾರಿಗಳಿಗೆ ಈ ವಾರ ಪ್ರಗತಿಕರವಾಗಿ ಕಂಡುಬರಲಿರುತ್ತದೆ.

ವೃಷಭ:

ಎಲ್ಲ ಕೆಲಸಗಳೂ ಸಾವಕಾಶಗೊಳ್ಳಲಿರುತ್ತವೆ. ಸಂಪತ್ತಿನ ಸಂಗ್ರಹಣಾಸಕ್ತಿಯಿಂದ ಕೂಡಿದವರಾಗಿ ಕಾಣಬರುವಿರಿ. ಹಿರಿಯರ ಅಗಲಿಕೆಗಿರುವ ಸಂಘಟನೆ ಕಂಡುಬರುವುದು. ದೂರಗತ ಬಂಧುಜನರ ಭೇಟಿಯಾಗಲಿರುವುದು. ವ್ಯಾಪಾರಿಗಳಿಗೆ ಈ ವಾರ ಹೊಸತು ನೆಲೆಯನ್ನು ಕೊಡುವುದಾಗಿರುತ್ತದೆ.

ಮಿಥುನ:

ಸಾಮಾಜಿಕ ವಿಷಯಗಳ ಕಡೆಗೆ ಆಸಕ್ತಿಯನ್ನು ಹೊಂದಿದವರಾಗಿ ಕಾಣಬರುವಿರಿ. ಧಾರ್ಮಿಕ ವಿಷಯಾಸಕ್ತಿಯು ಕಂಡುಬರುವುದಾಗಿದೆ. ರಿಕಾರ್ಡು ವ್ಯವಸಾಯಗಳು ಅಪೂರ್ಣಗಳಾಗಿ ಕಂಡುಬರುವವು. ನೌಕರರು ಸ್ಥಾನಾಂತರಾಸಕ್ತರಾಗಲಿರುವರು. ವಿದ್ಯಾಜೀವನದವರು ಅಭಿವೃದ್ಧಿಗೊಳ್ಳುವರು.

ಕರ್ಕಟಕ:

ನಿಮ್ಮ ಮನಸ್ಸು ಕಲುಷಿತವಾಗಿರುವುದು. ಇದರಿಂದ ನಿಮ್ಮ ವ್ಯವಹಾರಗಳು ಐಕ್ಯತೆಯ ವಾತಾವರಣಕ್ಕೆ ಅನುಕೂಲವಾಗಿರುವುದಿಲ್ಲ; ರಿಕಾರ್ಡು ವ್ಯವಹಾರಗಳು ಮುಂದುವರಿಯುವವು. ನೌಕರರು ಸ್ಥಾನಾಂತರವನ್ನು ಹೊಂದಲಿರುವ ಸಂಪರ್ಕ ಕಾಣಬರುವುದು,

ಸಿಂಹ:

ಸಾಮಾಜಿಕದಲ್ಲಿ ಗೌರವವನ್ನು ಹೊಂದಲಿರುವಿರಿ. ಕುಟುಂಬದಲ್ಲಿ ನವೀನತೆಯ ವಾತಾವರಣ ಕಂಡುಬರುವುದಾಗಿದೆ. ವಾಸಸ್ಥಾನದ ಬದಲಾವಣೆಗಿರುವ ಯೋಜನೆಯನ್ನು ಹೊಂದಿದವರಾಗಿರುವಿರಿ. ರಿಕಾರ್ಡು ವ್ಯವಹಾರಗಳಲ್ಲಿ ಜಯಲಾಭವಾಗಲಿರುತ್ತದೆ.

ಕನ್ಯಾ:

ಹಲವಾರು ವಿಚಾರಕಲ್ಪನೆಗಳಿಂದ ಕೂಡಿದವರಾಗಿ ಕಾಣಬರುವಿರಿ. ಧಾರ್ಮಿಕ ವಿಷಯಗಳಲ್ಲಿ ಆಸಕ್ತಿ ಇರುತ್ತದೆ. ಪತ್ರ ವ್ಯವಹಾರಗಳನ್ನು ಮಾಡುವಾಗ ಜಾಗರೂಕತೆಯಿಂದ ಕೂಡಿದವರಾಗಬೇಕು. ನೌಕರರು ಅಭಿವೃದ್ಧಿಗೊಳ್ಳುವ ಕರ್ಮಯುಕ್ತರಾಗಲಿರುವರು.

ತುಲಾ:

ಪ್ರವಾಸ ನವೀನ ಚಾರ ಸಂಘಟನೆ ಆಕಸ್ಮಿಕ ಬದಲಾವಣೆಗಳನ್ನು ಹೊಂದಿದವರಾಗಿ ಕಂಡುಬರುವಿರಿ. ದೇಹಾರೋಗ್ಯದ ನೆಲೆಯು ಉತ್ತಮವಾಗಿರುವುದಿಲ್ಲ. ಬಂಧುಜನರ ಅಗಲಿಕೆಗಿರುವ ಸಂಪರ್ಕವು ಕಂಡುಬರುವುದಾಗಿದೆ. ವಿದ್ಯಾಜೀವನದವರಿಗೆ ಪ್ರಗತಿಯಾಗಲಿದೆ.

ವೃಶ್ಚಿಕ:

ಭಿನ್ನಭಿನ್ನ ವಿಚಾರಕಲ್ಪನೆಗಳಿಂದ ನೆಲಸಿದವರಾಗಿರುವಿರಿ. ಕುಟುಂಬದಲ್ಲಿ ಅಭಿವೃದ್ಧಿಗಿರುವ ಯೋಜನೆಗಳಿರುತ್ತವೆ. ದೇಹಾರೋಗ್ಯದ ನೆಲೆ ಚೆನ್ನಾಗಿರುವುದಿಲ್ಲ. ಪತ್ರವ್ಯವಹಾರಗಳು ಇರುತ್ತವೆ. ಪ್ರವಾಸವನ್ನು ಮಾಡಲಿರುವ ಸಂಪರ್ಕ ಕಾಣುವುದು.

ಧನು:

ನಿಮ್ಮ ಜೀವನದಲ್ಲಿ ನವೀನತೆಗಿರುವ ವ್ಯವಹಾರ ಸಂಪರ್ಕಗಳಾಗುತ್ತವೆ, ಕುಟುಂಬದಲ್ಲಿ ಮಹತ್ವದ ಘಟನೆಗಳು ಸಂಭವಿಸುತ್ತವೆ. ಸಂಪತ್ತಿನ ಪ್ರಗತಿಗಿರುವ ಸಂಪರ್ಕವು ಇರುತ್ತದೆ. ದೂರಗತ ಬಂಧುಜನರ ಸುಖವಾರ್ತೆಯನ್ನು ಹೊಂದಲಿರುವಿರಿ. ನೌಕರರಿಗೆ ಸ್ಥಾನಾಂತರಾವಕಾಶವಿರುತ್ತದೆ.

ಮಕರ:

ಬೇರೆ ಬೇರೆ ಕೆಲಸಗಳಿಂದ ಕೂಡಿದವರಾಗಿದ್ದು ಸಮಯಾವಕಾಶ ಕಡಮೆಯಾಗಿರುತ್ತದೆ. ಬಂಧುಜನರ ಭೇಟಿ ಸಹಾಯಸಿದ್ಧಿಗಳಿರುತ್ತವೆ. ಕೋರ್ಟು ವ್ಯವಹಾರಗಳು ಮುಂದುವರಿಯುತ್ತವೆ. ಶುಭಕೆಲಸಗಳಿಗೆ ಕೈಯನ್ನು ನೀಡಿದವರಾಗಿ ಕಾಣಬರುವಿರಿ. ಪ್ರವಾಸಕ್ಕಿರುವ ಸಂಪರ್ಕವಿದೆ.

ಕುಂಭ:

ಸಾಮಾಜಿಕ ವಿಷಯಗಳಲ್ಲಿ ಆಸಕ್ತಿಯನ್ನು ಹೊಂದಿದವರಾಗಿ ಕಾಣಬರುವಿರಿ. ಕೆಲಸಗಳು ಬಹುವಾಗಿದ್ದು ವಿರಾಮ ಕಡಮೆಯಾಗಿರುತ್ತದೆ. ಆಕಸ್ಮಿಕ ಘಟನೆಯಿಂದ ಕೂಡಿದವರಾಗಿ ಕಾಣಬರುವಿರಿ. ಪ್ರವಾಸವಿರುತ್ತದೆ.

ಮೀನ:

ಹಲವಾರು ಕೆಲಸಗಳ ತಾಕಲಾಟಗಳಿಂದ ಕೂಡಿರುವಿರಿ. ಸಂಪತ್ತಿನ ಪ್ರಗತಿಯನ್ನು ಹೊಂದಲಿರುವಿರಿ. ರಿಕಾರ್ಡು ವ್ಯವಹಾರಗಳಲ್ಲಿ ಜಯವನ್ನು ಹೊಂದಲಿರುವಿರಿ. ವ್ಯಾಪಾರಿಗಳಿಗೆ ಈ ವಾರ ಉನ್ನತಿಯನ್ನು ಕೊಡುವುದಾಗಿ ಕಾಣಬರುವುದು.

— —

ಚಿನ್ನದ ಬೆಲೆಯಲ್ಲಿ ಇಳಿತ

ಕಳ್ಳಸಾಗಾಣಿಕೆ ಹಾಗೂ ಇತರ ಆರ್ಥಿಕ ಅಪರಾಧಗಳ ವಿರುದ್ಧ ಸರಕಾರ ಕೈಗೊಂಡಿರುವ ದಿಟ್ಟ ಕಾರ್ಯಾಚರಣೆ ಮುಂಬಯಿಯ ಚಿನ್ನ—ಬೆಳ್ಳಿ ವ್ಯಾಪಾರಿಗಳಲ್ಲಿ ಒಂದು ರೀತಿಯ ಭೀತಿ ಉಂಟು ಮಾಡಿದಂತೆ ಕಂಡುಬರುತ್ತಿದೆ.

ತಾ. 8ರಲ್ಲಿ ಸೂಚಿಸಿದ ಬೆಲೆಗಳಂತೆ ಶುದ್ಧ ಚಿನ್ನದ ಬೆಲೆ 10 ಗ್ರಾಂಗಳಿಗೆ ರೂ. 520ರಿಂದ 494ಕ್ಕೆ ಇಳಿದಿದೆ. ಪವನಿನ ಬೆಲೆ ರೂ. 420ರಿಂದ ರೂ. 390ಕ್ಕೆ ಇಳಿದಿದೆ. ಈ ಹಠಾತ್ ಬೆಲೆ ಇಳಿಕೆಯಾದದ್ದು ಸರಕಾರದ ಕಾರ್ಯಾಚರಣೆ ಆರಂಭಗೊಂಡ ನಂತರ.

ಮುಂಬಯಿ ಬುಲಿಯನ್ ಅಸೋಸಿಯೇಶನು ಶುದ್ಧ ಚಿನ್ನ ಹಾಗೂ ಪವನುಗಳೆರಡಕ್ಕೂ ಬೆಲೆ ಸೂಚಿಸಿಯೇ ಇಲ್ಲ. ಕಾನೂನು ಕ್ರಮಕ್ಕೆ ಒಳಗಾಗುವ ಭೀತಿಯೇ ಇದಕ್ಕೆ ಕಾರಣವೆನ್ನಲಾಗಿದೆ. ಅಸೋಸಿಯೇಶನ್ ಈ ಬಗ್ಗೆ ಏನೂ ಕಾರಣ ನೀಡಿಲ್ಲ.

— —

ಯಲ್ಲಮ್ಮ ದೇವಸ್ಥಾನ ಮಸೂದೆಗೆ ರಾಷ್ಟ್ರಪತಿ ಸಮ್ಮತಿ

1974ರ ರೇಣುಕಾ ಯಲ್ಲಮ್ಮ ದೇವಸ್ಥಾನ ಆಡಳಿತ ಮಸೂದೆಗೆ ರಾಷ್ಟ್ರಪತಿಯವರು ಸಮ್ಮತಿ ನೀಡಿದ್ದಾರೆ ಎಂದು ಇಂದಿಲ್ಲಿ ಅಧಿಕೃತ ಪತ್ರಿಕಾ ಪ್ರಕಟಣೆಯೊಂದು ತಿಳಿಸಿದೆ.

ಕರ್ನಾಟಕ ಬೆಳಗಾವಿ ಜಿಲ್ಲೆಯ ಸೌಂದತ್ತಿಯಲ್ಲಿರುವ ರೇಣುಕಾ ಯಲ್ಲಮ್ಮ ದೇವಸ್ಥಾನವನ್ನು ಪ್ರವಾಸೀ–ಸಹ–ಯಾತ್ರಾ ಕೇಂದ್ರವನ್ನಾಗಿ ಅಭಿವೃದ್ಧಿಗೊಳಿಸಲು ಹಾಗೂ ಯಾತ್ರಾರ್ಥಿಗಳಿಗೆ ಉತ್ತಮ ಸೌಲಭ್ಯವನ್ನು ಒದಗಿಸಲು ಆಡಳಿತ ಮಂಡಳಿಯೊಂದರ ರಚನೆಗೆ ಈ ಮಸೂದೆ ಅವಕಾಶ ನೀಡುತ್ತದೆ.

— —

ಮಹಾವೀರ 2,500ನೇ ನಿರ್ವಾಣಮಹೋತ್ಸವ

ಭಗವಾನ್ ಮಹಾವೀರನ ಸಂದೇಶವನ್ನು ಮೂಲೆಮೂಲೆಗೂ ಪಸರಿಸುವ ನಿಟ್ಟಿನಲ್ಲಿ ಮಹಾವೀರ ನಿರ್ವಾಣದ 2500ನೇ ವರ್ಷವನ್ನು ಇದೇ 13-11-74ರಿಂದ 18-11-75ರ ವರೆಗೆ ಸೂಕ್ತರೀತಿಯಲ್ಲಿ ಆಚರಿಸಲು ಕಳೆದ ತಾ. 14ರಂದು ದ.ಕ. ಜಿಲ್ಲಾಧಿಕಾರಿ ಶ್ರೀ। ಎಸ್. ಬಿ. ಮುದ್ದಪ್ಪ ಅವರ ಅಧ್ಯಕ್ಷತೆಯಲ್ಲಿ ಸೇರಿದ ಸಭೆ ಕಾರ್ಯಕ್ರಮಗಳನ್ನು ರೂಪಿಸಿಕೊಂಡಿದೆ. ತಾ. 13—11—74ರಂದು ಉತ್ಸವವು ಮೂಡಬಿದ್ರೆಯಲ್ಲಿ ಉದ್ಘಾಟಿಸಲ್ಪಡುವುದೆಂದಾಗಿದೆ. ಶ್ರೀ। ಜಿ. ಪಿ. ರಾಜರತ್ನಂ, ಹಂ. ಪ. ನಾ., ಎ. ಎನ್. ಉಪಾಧ್ಯೆ ಮೊದಲಾದವರನ್ನು ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಲು ಆಮಂತ್ರಿಸುವುದೆಂದಾಗಿದೆ. ಉತ್ಸವಸಮಿತಿಗೆ ಜಿಲ್ಲಾಧಿಕಾರಿಗಳು ಅಧ್ಯಕ್ಷರು; ಜಿಲ್ಲಾ ಶಿಕ್ಷಣಾಧಿಕಾರಿಗಳು ಕನ್ವೀನರರು; ನಿಧಿಸಂಗ್ರಹಣ ಸಮಿತಿಗೆ ಧರ್ಮಸ್ಥಳದ ಶ್ರೀ। ವೀರೇಂದ್ರ ಹೆಗ್ಗಡೆಯವರು ಅಧ್ಯಕ್ಷರು, ಶ್ರೀ। ಜಯರಾಜ ಬಲ್ಲಾಳರು-ಕನ್ವೀನರ್.

ಅಖಿಲ ಭಾರತ ಕ್ರೀಡಾಕೂಟಕ್ಕೆ ಸಿದ್ಧತೆ

ಇದೇ ನವೆಂಬರ್ 1, 2 ಮತ್ತು 3ನೇ ತಾರೀಕುಗಳಲ್ಲಿ ಮಂಗಳೂರು ನೆಹರೂ ಮೈದಾನಿನಲ್ಲಿ ನಡೆಯಲಿರುವ ಅಖಿಲ ಭಾರತ ಆಹ್ವಾನ ಕ್ರೀಡಾಕೂಟಕ್ಕೆ ರಾಷ್ಟ್ರದಾದ್ಯಂತದ ಸುಮಾರು 400ಕ್ಕೂ ಹೆಚ್ಚು ಮಂದಿ ಶ್ರೇಷ್ಠ ಕ್ರೀಡಾಪಟುಗಳು ಭಾಗವಹಿಸುವ ನಿರೀಕ್ಷೆಯಿದ್ದು ಈ ಬಗ್ಗೆ ಈಗಾಗಲೇ ಭರದಿಂದ ಸಿದ್ಧತೆಗಳು ನಡೆಯುತ್ತಿವೆ. ಈ ರೀತಿಯ ರಾಷ್ಟ್ರೀಯ ಮಟ್ಟದ ಕ್ರೀಡಾಕೂಟವೊಂದು ಮಂಗಳೂರಲ್ಲಿ ನಡೆಯುವುದು ಇದು ಮೊದಲಬಾರಿಯಾಗಿದೆ.

ಯುವ ಚಟುವಟಿಕೆ ಸಪ್ತಾಹ

ಮಂಗಳೂರು ನೋರ್ತ್ ರೋಟರಿ ಕ್ಲಬ್ಬಿನ ಸಾಪ್ತಾಹಿಕ ಸಭೆಯು ತಾ. 15ರಂದು ಅಧ್ಯಕ್ಷ ರೋ। ಎಂ. ವಿ. ಭಂಡಾರ್ಕಾರರ ಅಧ್ಯಕ್ಷತೆಯಲ್ಲಿ ಹಿಂದಿ ಪ್ರಚಾರ ಸಮಿತಿ ಭವನದಲ್ಲಿ ಜರಗಿದಾಗ ಯುವ ಚಟುವಟಿಕೆ ಸಪ್ತಾಹ ಆಚರಿಸಲ್ಪಟ್ಟಿತು. ಯುವಜನ ವಿದ್ಯಾರ್ಥಿಗಳಾದ ಪೃಥ್ವೀರಾಜ್ ಡಿ. ಪಾಲ್, ಸಿರೀಲ್ ಒಸ್ವಾಲ್ಡ್ ರೇಗೋ, ಉದಯಕುಮಾರ ಪೈ ಮತ್ತು ವಿ. ಕರುಣಾಕರರಾವ್ ಅವರು ಬೇರೆ ಬೇರೆ ಯುವಜನ ಸಮಸ್ಯೆಗಳ ಕುರಿತು ಮಾತನಾಡಿದ್ದರು. ಶ್ರೀ। ಕೆ. ರವೀಂದ್ರ, ಎಂ. ಎಸ್. ಸಿ., ಸ್ಟುಡೆಂಟ್ ವೆಲ್ಫೇರ್ ಆಫೀಸರ್ ಕೆನರಾ ಕೊಲೇಜ್ (ಫಸ್ಟ್ ಗ್ರೇಡ್) ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಿ ಬೇರೆ ಬೇರೆ ಯುವಜನ ಸಮಸ್ಯೆಗಳ ಕಾರಣ ಮತ್ತು ಅವುಗಳ ಪರಿಹಾರ ಸೂಚಿಸಿ ಭಾಷಣಮಾಡಿದರು. ಆರಂಭದಲ್ಲಿ ಅಧ್ಯಕ್ಷರಿಂದ ಸ್ವಾಗತವಾಗಿ ಕೊನೆಯಲ್ಲಿ ರೋ। ವಿ. ಡಿ. ಕಾಮತರು ಧನ್ಯವಾದಗಳನ್ನರ್ಪಿಸಿದರು.

ಸ್ಕೌಟು ಶಿಕ್ಷಕರ ಪುನರ್ನವೀಕರಣ ಶಿಬಿರ

"ಸ್ವಾವಲಂಬನ ತತ್ವದ ಜೀವನಕ್ಕೆ 'ಸ್ಕೌಟಿಂಗ್' ಅಡಿಗಲ್ಲು. ಸ್ಕೌಟು ಚಟುವಟಿಕೆ ಹಾಗು ಮೂಲ ಶಿಕ್ಷಣತತ್ವಗಳು ನೀಟ ಸಂಪರ್ಕ ಹೊಂದಿರುವುದರಿಂದ ಇಂತಹ ಶಿಕ್ಷಣವನ್ನು ರಾಜ್ಯದಾದ್ಯಂತ ಕ್ರಿಯಾತ್ಮಕವಾಗಿ ನಡೆಸುವಂತಾಗಬೇಕು. ಈ ನಿಟ್ಟಿನಲ್ಲಿ ಶಿಕ್ಷಕರ ಪಾತ್ರ ಹಿರಿದು" ಎಂಬುದಾಗಿ ಸುರತ್ಕಲಿನ ಪ್ರೌಢ ಶಾಲಾ ಆವರಣದಲ್ಲಿ ವ್ಯವಸ್ಥೆಗೊಳಿಸಲಾದ ಸ್ಕೌಟು ಶಿಕ್ಷಕರ ಪುನರ್ನವೀಕರಣ ಶಿಬಿರದ ಉದ್ಘಾಟನೆಯನ್ನು ಮಾಡುತ್ತಾ ಕರ್ನಾಟಕ ರಾಜ್ಯದ ಜಂಟಿ ವಿದ್ಯಾ ಇಲಾಖಾ ನಿರ್ದೇಶಕ ಶ್ರೀ। ಎಸ್. ಕೃಷ್ಣರಾಯರು ಹೇಳಿದರು.

ಬ್ಯಾಂಕ್ ನೌಕರ ಸಂಘದ ದ್ವಿತೀಯ ಸಮ್ಮೇಳನ

ಉಡುಪಿ ತಾಲೂಕು ಬ್ಯಾಂಕ್ ನೌಕರರ ಸಂಘದ ದ್ವಿತೀಯ ಸಮ್ಮೇಳನವು ಇತ್ತೀಚೆಗೆ ಉಡುಪಿ ನಗರ ಸಭೆಯ ಸತ್ಯಮೂರ್ತಿ ಸ್ಮಾರಕ ಸಭಾ ಭವನದಲ್ಲಿ ಕರ್ನಾಟಕ ಬ್ಯಾಂಕ್ ನೌಕರರ ಸಂಘದ ಅಧ್ಯಕ್ಷ ಕಾಮ್ರೇಡ್ ಎಂ. ಕೇಶವಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. 'ಬ್ಯಾಂಕ್ ರಾಷ್ಟ್ರೀಕರಣವನ್ನು ಒತ್ತಾಯಿಸುವ ಕಾರ್ಯದಲ್ಲಿ ಬ್ಯಾಂಕ್ ನೌಕರರು ಅತ್ಯಂತ ದೊಡ್ಡ ಪಾತ್ರವಹಿಸಿದವರಾಗಿದ್ದಾರೆ. ರಾಷ್ಟ್ರೀಕರಣದಿಂದ ಗಿರಾಕಿಗಳಿಗೆ ಇನ್ನೂ ಉತ್ತಮ ಸೇವೆಯನ್ನು ಸಲ್ಲಿಸುವುದೇ ನೌಕರರ ಧೋರಣೆಯಾದರೂ ಮ್ಯಾನೇಜ್‌ಮೆಂಟ್ ಈ ಬಾಬಿನಲ್ಲಿ ಸಹಕರಿಸುತ್ತಿಲ್ಲ' ಎಂಬುದಾಗಿ ಅವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಹೇಳಿದರು.

ಲಾಯನ್ಸ್ ಕ್ಲಬ್ ಪಾಕ್ಷಿಕ ಸಭೆ

ಮಂಗಳೂರು ಲಾಯನ್ಸ್ ಕ್ಲಬ್ಬಿನ ಪಾಕ್ಷಿಕ ಸಭೆಯು ತಾ. 9ರಂದು ಕದ್ರಿ ಸೇವಾ ಮಂದಿರದಲ್ಲಿ ಲಾಯನ್ ಕೆ. ವಿ. ಪೈಯವರ ಅಧ್ಯಕ್ಷತೆಯಲ್ಲಿ ಜರಗಿದಾಗ ಮಂಗಳೂರು ರೋಟರಿ ಕ್ಲಬ್ಬಿನ ಅಧ್ಯಕ್ಷ ಡಾ। ಕೆ. ಎಸ್. ಪ್ರಭಾಕರರಾಯರು ಮುಖ್ಯ ಅತಿಥಿಯಾಗಿ ಭಾಷಣಮಾಡಿದರು. "ಸೇವಾತತ್ವ ಮತ್ತು ರೋಟರಿ" ಎಂಬ ವಿಷಯದ ಕುರಿತು ಅವರು ಮಾತನಾಡಿದರು. ಸೇವಾತತ್ವ ಭಾರತಕ್ಕೆ ಹೊಸತಲ್ಲವೆಂದೂ, ಸಾವಿರಾರು ವರ್ಷಗಳ ಹಿಂದಿನಿಂದ ಒಂದು ಪರಂಪರೆಯಾಗಿ ಅದು ಭಾರತದಲ್ಲಿ ಬಾಳಬಂದಿದೆಯೆಂದೂ ಹೇಳಿದ ಡಾ। ಪ್ರಭಾಕರರಾಯರು ಈ ಸಂಬಂಧವಾಗಿ ಗೀತೆಯ ಕೆಲವು ಶ್ಲೋಕಗಳನ್ನೂ ಉದಾಹರಿಸಿದದರು. ಆರಂಭದಲ್ಲಿ ಲಾಯನ್ ಕೆ. ವಿ. ಪೈಯವರು ಸ್ವಾಗತಿಸಿ ಮುಖ್ಯ ಅತಿಥಿಯವರ ಪರಿಚಯಮಾಡಿದ್ದು, ಕೊನೆಯಲ್ಲಿ ಕಾರ್ಯದರ್ಶಿ ಲಾಯನ್ ಡಾ। ಸಿ. ಆರ್. ಬಲ್ಲಾಳ್ ಅವರು ಧನ್ಯವಾದಗಳನ್ನರ್ಪಿಸಿದರು.

ಇಂಡಿಯನ್ ಮೆಡಿಕಲ್ ಎಸೋಸಿಯೇಶನ್

ಮೇಲಿನ ಸಂಘದ ದಕ್ಷಿಣ ಕನ್ನಡ ಜಿಲ್ಲಾ ಶಾಖೆಯ ವಾರ್ಷಿಕ ಮಹಾಸಭೆಯು ಇತ್ತೀಚೆಗೆ ಸೇರಿದಾಗ ಕಾರ್ಯಕಾರಿ ಮಂಡಳಿಗೆ ಈ ಕೆಳಗಿನ ಪದಾಧಿಕಾರಿಗಳು ಆಯ್ಕೆಯಾಗಿರುವರು:

ಡಾ। ಜಿ. ಡಿ. ಮೇಲಿಯತ್-ಅಧ್ಯಕ್ಷ, ಡಾ। ಕೆ. ಪಿ. ಗಣೇಶನ್ ಮತ್ತು ಡಾ। ವೆಂಕಟರಮಣಯ್ಯ-ಉಪಾಧ್ಯಕ್ಷರು, ಡಾ। ಎಂ. ಶಾಂತಾರಾಮ ಶೆಟ್ಟಿ-ಕಾರ್ಯದರ್ಶಿ ಹಾಗು ಕೋಶಾಧಿಕಾರಿ, ಡಾ। ರಾಜಶೇಖರ್ ವಾರಿಯರ್-ಜತೆಕಾರ್ಯದರ್ಶಿ.

ಸ್ಪಷ್ಟೀಕರಣ

ಪ್ರಸ್ತುತಃ ಕರ್ನಾಟಕ ರಾಜ್ಯದಾದ್ಯಂತ ರೈತರಿಗೆ ಕಾರ್ಡುಗಳ ಮೂಲಕ ರಾಸಾಯನಿಕ ಗೊಬ್ಬರಗಳ ವಿತರಣೆಯಾಗುತಿದ್ದು, ಜಿಲ್ಲೆಯಲ್ಲಿ ಈ ಕಾರ್ಯ ಭರದಿಂದ ಸಾಗುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂಮಿಯ ಒಕ್ಕಲುತನ ಪದ್ಧತಿಯು ಒಂದು ವಿಶಿಷ್ಟತರದ್ದಾಗಿದ್ದು, ಕೃಷಿ ಇಲಾಖೆಯಿಂದ ಒದಗಿಸುತ್ತಿರುವ ಗೊಬ್ಬರದ ಕಾರ್ಡುಗಳನ್ನು ರೈತರು ತಮ್ಮ ಒಕ್ಕಲುತನ ಒಡೆತನ ಸಂಬಂಧವಾದ ವ್ಯಾಜ್ಯಗಳಲ್ಲಿ ಆಧಾರವನ್ನಾಗಿ ಬಳಸುವ ಸಾಧ್ಯತೆಗಳಿವೆಯೆಂಬ ಭಾವನೆಯು ತಪ್ಪೆಂದು ಜಿಲ್ಲಾ ಡೆಪ್ಯೂಟಿ ಕೃಷಿ ಡೈರೆಕ್ಟರರು ಸ್ಪಷ್ಟೀಕರಿಸಿದ್ದಾರೆ.

ವ್ಯಾಪಾರಿಗಳ ದಸ್ತಗಿರಿ

ಬೆಂಗಳೂರಿಂದ ಆಗಮಿಸಿದ ವಿಶೇಷ ಸಿ. ಐ. ಡಿ.ಗಳು ಮಂಗಳೂರು ಕೆ. ಎಸ್. ಆರ್. ರಸ್ತೆಯಲ್ಲಿರುವ ಬಿ. ಪಿ. ಪಾರೇಖ್ ಸಂಸ್ಥೆಯ ಮಾಲಕ ಶ್ರೀ। ಬಚ್ಚೂಭಾಯಿ ಪಾರೇಖ್ ಮತ್ತು ಸೀಫುಡ್ ಸಂಸ್ಥೆಯೊಂದರ ಮಾಲಕ ಶ್ರೀ। ಮೊಯಿದಿನ್ ಕುಂಞ ಎಂಬವರನ್ನು ದಸ್ತಗಿರಿಮಾಡಿರುವುದಾಗಿ ತಿಳಿಯಲಾಗಿದೆ. ಸೆಂಟ್ರಲ್ ಎಕ್ಸೈಜ್ ಅಧಿಕಾರಿಗಳು ನಗರದ ಕೇಂದ್ರ ಭಾಗದಲ್ಲಿರುವ ಟೈಲರಿಂಗ್ ಅಂಗಡಿಯೊಂದರಿಂದ ಕಳ್ಳಸಾಗಾಣಿಕೆಯ ಸುಮಾರು 6000 ರೂಪಾಯಿ ಮೌಲ್ಯದ ವಿದೇಶಿ ಬಟ್ಟೆಗಳನ್ನು ವಶಪಡಿಸಿಕೊಂಡಿರುವರು.

ಭಾರ ಎತ್ತುವ ಸ್ಪರ್ಧೆ

ತ್ರಿಚೂರ್‌ದಲ್ಲಿ ಇತ್ತೀಚೆಗೆ ಜರಗಿದ ದಕ್ಷಿಣ ಭಾರತ ಭಾರ ಎತ್ತುವ ಚ್ಯಾಂಪಿಯನ್‌ಶಿಪ್‌ದಲ್ಲಿ ಕರ್ನಾಟಕದ ನಗರ್ ನಾರಾಯಣ ಶೆಣೈ ಹೆವಿವೈಟ್‌ನಲ್ಲಿ ಪ್ರಥಮ ಸ್ಥಾನವನ್ನೂ ಮಹಾಬಲರೈ ಮಿಡ್ಲ್ ಹೆವಿವೈಟನಲ್ಲಿ ದ್ವಿತೀಯ ಸ್ಥಾನವನ್ನೂ ಪಡೆದಿರುವರು. ಇವರಿಬ್ಬರೂ ಮಂಗಳೂರಿನ ಬಾಲಮಾರುತಿ ವ್ಯಾಯಾಮಮಂಡಲದಲ್ಲಿ ತರಬೇತಿಹೊಂದಿದವರಿರುತ್ತಾರೆ.

ಎಫ್. ಎಕ್ಸ್. ಡಿ. ಪಿಂಟೋ ನಿಧನ

ಮಂಗಳೂರಿನ ಖ್ಯಾತ ಹಂಚು ಉದ್ದಿಮೆಗಾರರಲ್ಲೊಬ್ಬರಾಗಿದ್ದು, ಹಲವು ಸಂಘಸಂಸ್ಥೆಗಳಲ್ಲಿ ಡೈರೆಕ್ಟರರಾಗಿ ದುಡಿದ ಶೆವೆಲಿಯರ್ ಎಫ್. ಎಕ್ಸ್. ಡಿ. ಪಿಂಟೋ ಅವರು ಅಲ್ಪಕಾಲದ ಅಸ್ವಸ್ಥದಿಂದ ತಾ. 17ರಂದು ರಾತ್ರೆ ಕಂಕನಾಡಿ ಫಾದರ್ ಮುಲ್ಲರ್ಸ್ ಆಸ್ಪತ್ರೆಯಲ್ಲಿ ತಮ್ಮ 68ನೇ ವರ್ಷ ಪ್ರಾಯದಲ್ಲಿ ದೈವಾಧೀನರಾದರು. ಶ್ರೀ। ಪಿಂಟೋರವರು ಜಿಲ್ಲಾ ಕೊಂಗ್ರೆಸ್ ಸಮಿತಿಯ ಪ್ರಥಮ ಕ್ರೈಸ್ತ ಅಧ್ಯಕ್ಷರಾಗಿ ಸೇವೆಸಲ್ಲಿಸಿದ್ದರಲ್ಲದೆ 1957ರಿಂದ 62ರ ವರೆಗೆ ಶಾಸಕರಾಗಿಯೂ ಸೇವೆಸಲ್ಲಿಸಿದ್ದರು.

— —

PRABHAT, KANNADA WEEKLY, MANGALORE-575001

REGD. No. KRNL-8.

To

Printed at The Prabhat Printers, Ltd., Mangalore. Edited and Published by K. V. Shenoy at Prabhat Office, Car Street, Mangalore-1.